ಕರ್ನಾಟಕ ಸರ್ಕಾರ

ನಂ:ಎಸ್‌ಡಬ್ಲ್ಯೂಎಲ್ 270 ಎಸ್‌ಎಡಿ 86.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ, 3ನೇ ಹಂತ,
2ನೇ ಮಹಡಿ. ಡಾ.ಅಂಬೇಡ್ಕರ ವೀಧಿ,
ಬೆಂಗಳೂರು, ದಿ: 5-5-1987.

## ಸುತ್ತೋಲೆ

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜಾತಿ ಪ್ರಮಾಣ ಪತ್ರಗಳನ್ನು ಕೊಡುವುದರಲ್ಲಿನ ನ್ಯೂನತೆಗಳು.

ooooo

ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಗಳನ್ವಯ ಸಂಬಂಧಪಟ್ಟ ತಾಲ್ಲೂಕುಗಳ ತಹಶೀಲ್ದಾರರು ಮಾತ್ರ ಜಾತಿ ಪ್ರಮಾಣ ಪತ್ರಗಳನ್ನು ಕೊಡುವ ಅಧಿಕಾರ ಹೊಂದಿರುತ್ತಾರೆ. ಜಾತಿ ಪ್ರಮಾಣ ಪತ್ರಗಳನ್ನು ಪಡೆಯುವಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ಹಾಗೂ ಜಾತಿ ಪ್ರಮಾಣ ಪತ್ರವನ್ನು ಕೊಡುವ ಅಧಿಕಾರವುಳ್ಳ ತಾಲ್ಲೂಕುಗಳ ತಹಶೀಲ್ದಾರರಿಗೆ ಇರುವ ತೊಂದರೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಸರ್ಕಾರ ದಿನಾಂಕ 23-3-87ರಂದು ಆದೇಶ ಕ್ರಮಾಂಕ ಎಸ್‌ಡಬ್ಲ್ಯೂಎಲ್ 213 ಎಸ್‌ಎಡಿ 85ನ್ನು ಸಹಾ ಹೊರಡಿಸಿದೆ.

ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಜಾತಿ ಪ್ರಮಾಣ ಪತ್ರಗಳನ್ನು ಕೊಡುವ ಅಧಿಕಾರವುಳ್ಳ ತಹಶೀಲ್ದಾರರುಗಳು ಈವರೆವಿಗೆ ಕೊಟ್ಟಿರುವ ಜಾತಿ ಪ್ರಮಾಣ ಪತ್ರಗಳಲ್ಲಿ ಕೆಳಕಂಡ ನ್ಯೂನತೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ.

(1) ಜಾತಿ ಪ್ರಮಾಣ ಪತ್ರಗಳಲ್ಲಿ ಅಭ್ಯರ್ಥಿಗಳ ಜಾತಿಯನ್ನೇ ನಮೂದಿಸಿರುವುದಿಲ್ಲ.

(2) ಜಾತಿ ಪ್ರಮಾಣ ಪತ್ರಗಳಲ್ಲಿ ಅಧ್ಯಕ್ಷೀಯ ಆದೇಶ ಯಾವುದು ಎಂಬುದನ್ನು ಸರಿಯಾಗಿ ಗುರುತು ಮಾಡಿಲ್ಲ.

(3) ಜಾತಿ ಪ್ರಮಾಣಪತ್ರಗಳಲ್ಲಿ ತಿದ್ದುಪಡಿ ಮಾಡಲಾದುವುಗಳನ್ನು ಧೃಢೀಕರಿಸಿರುವುದಿಲ್ಲ.

(4) ಜಾತಿ ಪ್ರಮಾಣ ಪತ್ರಗಳಲ್ಲಿ ವಲಸೆ ಬಂದಿರುವವರ ಬಗ್ಗೆ ಸಂಬಂಧಪಟ್ಟ (Migrated ) ಕಂಡಿಕೆಯನ್ನು ಭರ್ತಿ ಮಾಡಿರುವುದಿಲ್ಲ.

(5) ಜಾತಿ ಪ್ರಮಾಣ ಪತ್ರಗಳಲ್ಲಿ ಕಛೇರಿಯ ಸೀಲು ಮತ್ತು ಬಿಲ್ಲೆ (ಎಂಬಲಮ್) ಹಾಕಿರುವುದಿಲ್ಲ.

(6) ಅಧ್ಯಕ್ಷೀಯ ಆದೇಶದಲ್ಲಿ ಸೇರಿಲ್ಲದ ಜಾತಿಗಳವರಿಗೂ ಸಹಾ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಜಾತಿ ಪ್ರಮಾಣ ಪತ್ರಗಳನ್ನು ಕೊಟ್ಟಿರುವುದು.

(7) ಕೆಲವು ಜಾತಿ ಪ್ರಮಾಣ ಪತ್ರಗಳಲ್ಲಿ (ಶೈಕ್ಷಣಿಕ ಸಲುವಾಗಿ ಮಾತ್ರ) ಎಂದು ನಮೂದಿಸಲಾಗಿದೆ.

(8) ಜಾತಿ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಜಾತಿಗೂ ಮತ್ತು ಶಾಲೆಗಳ ದಾಖಲೆಗಳಲ್ಲಿನ ಜಾತಿಗೂ ವ್ಯತ್ಯಾಸವಿರುವುದು.

(9) ಜಾತಿ ಪ್ರಮಾಣ ಪತ್ರಗಳನ್ನು ಕೇಂದ್ರ ಸರ್ಕಾರದ ದಿನಾಂಕ 6-8-84ರ ಪತ್ರಾಂಕ ಬಿಸಿ-16014:1:82:ಎಸ್‌ಸಿ ಮತ್ತು ಬಿಸಿಡಿ-1 ಇದರಲ್ಲಿ ನಿಗದಿ ಪಡಿಸಿರುವ ಫಾರಂ ಬಿಟ್ಟು ಬೇರೆ ಫಾರಂನಲ್ಲಿ ಕೊಟ್ಟಿರುವುದು.

ರಾಜ್ಯದಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಪ್ರಮಾಣ ಪತ್ರಗಳನ್ನು

ಕೊಡಲು ಅಧಿಕಾರವುಳ್ಳ ತಾಲ್ಲೂಕಿನ ತಹಶೀಲ್ದಾರರುಗಳು ಮೇಲ್ಕಂಡ ನೂನ್ಯತೆಗಳನ್ನು ಗಮನಿಸಿ, ಇನ್ನು ಮುಂದೆ ಅಂಥಹ ನ್ಯೂನತೆಗಳಿಗೆ ಅವಕಾಶ ಕೊಡದೆ ಸರಿಯಾದ ರೀತಿಯಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಕೊಡತಕ್ಕದೆಂದು ಈ ಮೂಲಕ ಸೂಚಿಸಿದೆ.

(ಟಿ.ಎಸ್.ತಿಪ್ಪೇಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

ನಕಲು ಪ್ರತಿ:

1. ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
2. ವಿಭಾಗಾಧಿಕಾರಿಗಳು.
3. ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು.
4. ಎಲ್ಲಾ ಜಿಲ್ಲಾಧಿಕಾರಿಗಳು (ತಮ್ಮ ಅಧೀನ ಅಧಿಕಾರಿಗಳಿಗೆ ತಿಳಿಸುವಂತೆ ಕೋರಲಾಗಿದೆ)
5. ಇಲಾಖಾ ಮುಖ್ಯಸ್ಥರುಗಳು.
6. ಉಪ ವಿಭಾಗಾಧಿಕಾರಿಗಳು.
7. ಆರಕ್ಷಕ ಉಪ ಮಹಾ ನಿರೀಕ್ಷಕರು, ನಾಗರೀಕ ಹಕ್ಕು ಸಮಾಚಾರಣ ವಿಭಾಗ, ಬೆಂಗಳೂರು.
8. ರಾಜ್ಯದ ಎಲ್ಲಾ ತಾಲ್ಲೂಕಿನ ತಹಶೀಲ್ದಾರರುಗಳಿಗೆ,
9. ನಿರ್ದೇಶಕರು, ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
10. ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪರಿಷತ್.
11. ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು.
12. ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ,
13. ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ,
14. ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ,
15. ಕಾರ್ಯದರ್ಶಿ, ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ಆಪ್ತ ಕಾರ್ಯದರ್ಶಿ,
16. ಸಾಪ್ತಾಹಿಕ ರಾಜ್ಯ ಪತ್ರ.
17. ಶಾಖಾ ಕಡತ.
18. ಪತ್ರಿಕಾ ಸಮ್ಮೇಳನ.

ಜಿ.ಕೆ.